# ಕರ್ನಾಟಕ ಯಕ್ಷಗಾನ ಅಕಾಡೆಮಿ, ಬೆಂಗಳೂರು

www.karnatakayakshaganaacademy.com

ಪ್ರಾಯೋಜಕತ್ವದಲ್ಲಿ ಪ್ರಕಾಶಿತ

ಯಕ್ಷಗಾನ ಪ್ರಸಂಗ

# ಭಕ್ತ ಮಾರ್ಕಂಡೇಯ

ಕವಿ

## ಅಡೂರು ಬಳಕಿಲ ವಿಷ್ಣ್ವಯ್ಯ

ಅಂತರಜಾಲ ಆವೃತ್ತಿ, ಸಹ-ಪ್ರಕಾಶಕರು ಮತ್ತು ಪ್ರಕಾಶನ ನಿರ್ವಾಹಕರು

ಯಕ್ಷವಾಹಿನಿ®

Email: yakshaprasangakosha@gmail.com

Blog: www.yakshaprasangakosha.com

ಆವೃತ್ತಿ ೧.೦ ಜುಲೈ ೩೦, ೨೦೧೯

ಯಕ್ಷವಾಹಿನಿ®

Email: yakshaprasangakosha@co.gmailm, yakshavahini@co.gmailm Blog: www.yakshaprasangakosha.com

## ಯಕ್ಷವಾಹಿನಿಯ ಯಕ್ಷಪ್ರಸಂಗಕೋಶ ಯೋಜನಾ ಸಮೂಹ

**ಗೌರವಾನ್ವಿತ ಸಂಪಾದಕ ಮಂಡಳಿ:**

ಶ್ರೀಧರ ಡಿ. ಎಸ್. (ಗೌರವಾಧ್ಯಕ್ಷರು), ಗಿಂಡೀಮನೆ ಮೃತ್ಯುಂಜಯ, ಡಾ. ಆನಂದರಾಮ ಉಪಾಧ್ಯ, ದಿನೇಶ ಉಪ್ಪೂರ, ಅಶೋಕ್ ಮುಂಗಳಿಮನೆ

**ಗೌರವಾನ್ವಿತ ಸಲಹಾ ಮಂಡಳಿ:**

ಅನಂತ ಪದ್ಮನಾಭ ಪಾಠಕ್, ವಿದುಷಿ ಸುಮಂಗಲಾ ರತ್ನಾಕರ್, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅವಿನಾಶ್ ಬೈಪಾಡಿತ್ತಾಯ, ಮಹೇಶ್ ಪದ್ಯಾಣ, ನಾರಾಯಣ ಹೆಬ್ಬಾರ್

**ಕಾರ್ಯಕಾರಿ ಮಂಡಳಿ:**

ರವಿ ಮಡೋಡಿ (ಯೋಜನಾಧ್ಯಕ್ಷ), ಡಾ. ಪ್ರದೀಪ್ ಸಾಮಗ (ಯೋಜನಾ ಕಾರ್ಯದರ್ಶಿ), ನಟರಾಜ ಉಪಾಧ್ಯ (ಯೋಜನಾ ಸಹಕಾರ್ಯದರ್ಶಿ), ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ ನಾ ಭಟ್, ಅಜಿತ್ ಕಾರಂತ್, ಇಟಗಿ ಮಹಾಬಲೇಶ್ವರ ಭಟ್, ಅಶ್ವಿನಿ ಹೊದಲ, ಶ್ರೀಕೃಷ್ಣ ಭಟ್ ಸುಣ್ಣಂಗುಳಿ, ವಿದ್ಯಾ ಹೆಗಡೆ ಕವಿತಾಸ್ಫೂರ್ತಿ, ಶಿವಕುಮಾರ ಬಿ. ಅಳಗೋಡು

**ಗೌರವಾನ್ವಿತ ಸ್ವಯಂಸೇವಕರು:**

ಗಣಪತಿ ಭಟ್ ಪಿ, ವಸುಮತಿ ಜಿ., ಅನಿತಾ ಎಂ. ಜಿ. ರಾವ್, ರಂಜನ ಭಟ್, ಶಶಿಕಲಾ ಮೂರ್ತಿ, ರಘುರಾಜ್ ಶರ್ಮ, ಚಂದ್ರ ಆಚಾರ್, ಸುಬ್ರಹ್ಮಣ್ಯ ಭಾಗವತ್, ಉಮೇಶ್ ಶಿರೂರು, ವೆಂಕಟೇಶ್ ಹೆಗಡೆ, ವೆಂಕಟೇಶ್ ವೈದ್ಯ, ಕೆ. ಗೋವಿಂದ ಭಟ್ ಬೆಂಗಳೂರು, ಸತೀಶ್ ಯಲ್ಲಾಪುರ, ಮಯೂರಿ ಉಪಾಧ್ಯಾಯ, ಶ್ರೀಕಾಂತ್ ನಾಯಕ್, ರವಿ ಕಾಮತ್ ಕುಮಟಾ, ರಾಮಕೃಷ್ಣ ಮರಾಠಿ, ಶ್ರೀಕಾಂತ್ ನಾಯಕ್, ರಘುರಾಜ್ ಶರ್ಮಾ

**ಸಹಕಾರ:**

**ಪ್ರಸಂಗ ಕವಿಗಳು:**

ಬಲಿಪ ನಾರಾಯಣ ಭಾಗವತ, ಹೊಸ್ತೋಟ ಮಂಜುನಾಥ ಭಾಗವತ, ಪ್ರೊ. ಎಮ್. ಎ. ಹೆಗಡೆ, ಡಾ. ಅಮೃತ ಸೋಮೇಶ್ವರ, ಶ್ರೀಧರ ಡಿ. ಎಸ್., ಎಂ. ಆರ್. ವಾಸುದೇವ ಸಾಮಗ, ಎಂ.ಆರ್. ಲಕ್ಷ್ಮೀನಾರಾಯಣ, ಮಧುಕುಮಾರ್ ಬೋಳೂರು, ಅಗರಿ ಭಾಸ್ಕರ ರಾವ್, ಅಂಬರೀಷ ಭಾರದ್ವಾಜ, ಶಿವಕುಮಾರ ಬಿ. ಅಳಗೋಡು, ದಿನೇಶ ಉಪ್ಪೂರ, ಗಿಂಡೀಮನೆ ಮೃತ್ಯುಂಜಯ, ಇಟಗಿ ಮಹಾಬಲೇಶ್ವರ ಭಟ್, ವಿಶ್ವವಿನೋದ ಬನಾರಿ, ಮಧೂರು ವೆಂಕಟಕೃಷ್ಣ

**ಕವಿಚರಿತ್ರೆ ಮತ್ತು ಪ್ರಸಂಗಯಾದಿ:**

ಡಾ. ಕಬ್ಬಿನಾಲೆ ವಸಂತ ಭಾರದ್ವಾಜ, ಡಾ. ಪಾದೇಕಲ್ಲು ವಿಷ್ಣುಭಟ್

**ಸಂಸ್ಥೆಗಳು:**

ಕರ್ನಾಟಕ ಯಕ್ಷಗಾನ ಅಕಾಡೆಮಿ & ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ಕರ್ನಾಟಕ ಸರ್ಕಾರ), ಯಕ್ಷಗಾನ ಕಲಾರಂಗ, ಉಡುಪಿ, ಯಕ್ಷಸಿಂಚನ, ಬೆಂಗಳೂರು

**ಪ್ರಸಂಗ ಪುಸ್ತಕ ಒದಗಣೆ ಮತ್ತಿತರ:**

ಡಾ. ರಾಧಾಕೃಷ್ಣ ಉರಾಳ್, ಅಗರಿ ಭಾಸ್ಕರ ರಾವ್ , ಗೋಪಾಲಕೃಷ್ಣ ಭಾಗವತ್, ಶ್ರೀಪಾದಗದ್ದೆ, ಮುರಳಿ ಶ್ರೇಣಿ, ಅನಂತ ದಂತಳಿಕೆ, ಗುರುನಂದನ್ ಹೊಸೂರು, ನಾರಾಯಣ ಶಾನುಭಾಗ, ನಾರಾಯಣ ಯಾಜಿ, ಶೇಷಗಿರಿಯಪ್ಪ, ಎಸ್ ಎಮ್ ಹೆಗಡೆ, ದಿವಾಕರ ಹೆಗಡೆ, ನಿತ್ಯಾನಂದ ಹೆಗಡೆ ಮೂರೂರು, ಶ್ರೀನಿಧಿ ಡಿ.ಎಸ್, ರವೀಂದ್ರ ಐತುಮನೆ, ಗುರುರಾಜ ಹೊಳ್ಳ ಬಾಯಾರು, ಸುರೇಶ್ ಹೆಗಡೆ ಬೆಳಸಲಿಗೆ, ಮನೋಹರ ಕುಂದರ್, ನಂದಳಿಕೆ ಬಾಲಚಂದ್ರ ರಾವ್, ರಘುರಾಮ್ ಮುಳಿಯ, ಸುಧಾ ಕಿರಣ್ ಅಧಿಕಶ್ರೇಣಿ, ಮಹಾಬಲಮೂರ್ತಿ ಕೊಡ್ಲೆಕೆರೆ, ಎ. ಎನ್. ಹೆಗಡೆ, ಮುರಳೀಧರ ಉಪಾಧ್ಯ

## ಯಕ್ಷವಾಹಿನಿ ಸಂಸ್ಥೆ

**ಗೌರವಾನ್ವಿತ ಸಲಹಾ ಮಂಡಳಿ:**

ಮಲ್ಪೆ ಲಕ್ಷ್ಮೀನಾರಾಯಣ ಸಾಮಗ (ಗೌರವಾಧ್ಯಕ್ಷರು), ಶ್ರೀಧರ ಡಿ. ಎಸ್., ಗಿಂಡೀಮನೆ ಮೃತ್ಯುಂಜಯ, ದಿನೇಶ ಉಪ್ಪೂರ, ಡಾ. ಪ್ರದೀಪ ಸಾಮಗ, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅನಂತ ಪದ್ಮನಾಭ ಪಾಠಕ್, ವಿದುಷಿ ಸುಮಂಗಲಾ ರತ್ನಾಕರ್, ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ ನಾ ಭಟ್, ರಾಘವೇಂದ್ರ ಮಯ್ಯ (ಲೆಕ್ಕಪತ್ರ ಪರಿಶೋಧಕರು)

**ವಿಶ್ವಸ್ಥ ಮಂಡಳಿ ಮತ್ತು ಕಾರ್ಯಕಾರಿ ಮಂಡಳಿ:**

ಡಾ. ಆನಂದರಾಮ ಉಪಾಧ್ಯ (ಅಧ್ಯಕ್ಷ), ನಟರಾಜ ಉಪಾಧ್ಯ (ಕಾರ್ಯದರ್ಶಿ), ರವಿ ಮಡೋಡಿ (ಖಜಾಂಚಿ)

**ಆರ್ಥಿಕ ಸಹಾಯ:**

ಅಶೋಕ್ ಕೊಡ್ಲಾಡಿ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

**ಪುಸ್ತಕ ಸಹಾಯ:**

ವಿದುಷಿ ಸುಮಂಗಲ ರತ್ನಾಕರ್, ಮಂಟಪ ಪ್ರಭಾಕರ ಉಪಾಧ್ಯ, ಡಾ. ಆನಂದರಾಮ ಉಪಾಧ್ಯ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

# ಮೊದಲ ಮಾತು

ಯಕ್ಷಗಾನ ಪ್ರದರ್ಶನಗಳಿಗೆ ಆಧಾರವಾಗಿರುವುದು ಪ್ರಸಂಗಸಾಹಿತ್ಯ. ಅದು ಯಕ್ಷಗಾನದ ಏಕಮಾತ್ರ ಲಿಖಿತಸಾಹಿತ್ಯವೂ ಹೌದು. ಅದರ ಅಭಾವದಲ್ಲಿ ಯಕ್ಷಗಾನದ ಅಡಿಪಾಯವೇ ಇಲ್ಲವಾಗುತ್ತದೆ. ಈಗ ಅಂದಾಜಿಸಿದಂತೆ ಇಂಥ ಪ್ರಸಂಗಕೃತಿಗಳ ಸಂಖ್ಯೆ ಐದು ಸಾವಿರಕ್ಕೂ ಮಿಕ್ಕಿದೆ. ವರ್ಷವರ್ಷವೂ ನೂರಾರು ಹೊಸಕೃತಿಗಳ ಸೇರ್ಪಡೆಯಾಗುತ್ತಲೇ ಇವೆ. ಆದರೆ ವಿಷಾದದ ಸಂಗತಿಯೆಂದರೆ ಸೂಕ್ತವಾದ ವಿತರಣಾ ವ್ಯವಸ್ಥೆಯಿಲ್ಲ. ಬೇಕೆಂಬುವರಿಗೆ ಪ್ರಸಂಗಗಳು ಲಭಿಸುತ್ತಿಲ್ಲ. ಅನೇಕ ಪ್ರಾಚೀನ ಅರ್ವಾಚೀನ ಕೃತಿಗಳಿಗೆ ಮುದ್ರಣ ಭಾಗ್ಯವಿಲ್ಲ. ಮುದ್ರಿತವಾದ ಕೃತಿಗಳ ಮಾರಾಟ ಮತ್ತಷ್ಟು ತೊಡಕಿನದು. ಹೀಗಾಗಿ ಈಗಾಗಲೇ ಅನೇಕ ಕೃತಿಗಳು ನಾಶವಾಗಿವೆ; ಮತ್ತಷ್ಟು ನಾಶವಾಗುತ್ತಿವೆ.

ಯಕ್ಷಗಾನ ಪ್ರಸಂಗಗಳು ಕನ್ನಡಸಾಹಿತ್ಯದ ಶ್ರೀಮಂತಿಕೆಯ ದ್ಯೋತಕಗಳು. ಕನ್ನಡದಲ್ಲಿ ಬೆಳೆದು ಬಂದ ಛಂದೋ ವೈವಿಧ್ಯದ ಸಾರವನ್ನೆಲ್ಲ ಹೀರಿಕೊಂಡು ಸುಪುಷ್ಟವಾಗಿ ಬೆಳೆದು ನಿಂತ ಈ ಸಾಹಿತ್ಯ ಪ್ರಕಾರವು ಕನ್ನಡಕ್ಕೊಂದು ಹೆಮ್ಮೆ. ಅದರ ಸಿದ್ಧಿ ಸಾಧನೆಗಳನ್ನು ಕುರಿತು ಗಂಭೀರವಾದ ಅಧ್ಯಯನದ ಆವಶ್ಯಕತೆಯಿದೆ. ಆದರೆ ಪ್ರಸಂಗಳ ಅಲಭ್ಯತೆ ಅಧ್ಯಯನಕ್ಕೆ ತೊಡಕಾಗಿದೆ. ಅಧ್ಯಯನಕ್ಕೆ ತೊಡಗುವವರಿಗೆ ಕೃತಿಗಳನ್ನು ಸಂಗ್ರಹಿಸುವುದೊಂದು ದೊಡ್ಡ ಸವಾಲಾಗಿದೆ. ಇದರಿಂದ ಯಕ್ಷಗಾನಕ್ಕೆ ತನ್ಮೂಲಕ ಕನ್ನಡ ಸಾಹಿತ್ಯಕ್ಕೆ ಹಾನಿಯಾಗುತ್ತಿದೆ.

ಇದನ್ನು ಮನಗಂಡ ಯಕ್ಷಗಾನ ಅಕಾಡೆಮಿಯು ಮಹತ್ವಾಕಾಂಕ್ಷೆಯ ಯೋಜನೆಯೊಂದನ್ನು ಕೈಗೊಂಡಿದೆ. ಅದೇ ಯಕ್ಷಗಾನ ಪ್ರಸಂಗಗಳ ಡಿಜಿಟಲೀಕರಣ. ಎಲ್ಲ ಪ್ರಸಂಗಗಳನ್ನು ಡಿಜಿಟಲೀಕರಣಕ್ಕೊಳಪಡಿಸಿ ಅಕಾಡೆಮಿಯ ವೆಬ್ಸೈಟಿನ ಮೂಲಕ ಆಸಕ್ತರಿಗೆ ಉಚಿತವಾಗಿ ತಲುಪಿಸುವ ವ್ಯವಸ್ಥೆ ಇದು. ಪ್ರಪಂಚದ ಯಾವುದೇ ಮೂಲೆಯಲ್ಲಿದ್ದರೂ ಬೇಕಾದ ಕೃತಿಯನ್ನು ಪಡೆದುಕೊಳ್ಳಲು ಯಕ್ಷಗಾನ ಪ್ರಸಂಗವನ್ನು ತೆಗೆದುಕೊಂಡು ಯಕ್ಷಗಾನ ಮಾಡುವವರಿಗೆ ಅತ್ಯಂತ ಅನುಕೂಲ. ಅಧ್ಯಯನಕ್ಕೂ, ಸಂಗ್ರಹಕ್ಕೂ ಅನುಕೂಲ ಹಾಗೂ ಯಕ್ಷಗಾನ ಪ್ರಿಯರಿಗೆ ಆಪ್ತವಾದೀತೆಂದು ಭಾವಿಸಿದ್ದೇವೆ.

ಇದನ್ನು ಕಾರ್ಯಗತಗೊಳಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನೆರವು ದೊಡ್ಡದು. ಈ ಕಾರ್ಯಕ್ಕೆ ಯಕ್ಷವಾಹಿನಿ ಸಂಸ್ಥೆಯು ಕೈಜೋಡಿಸಿರುವುದು ಹಾಗೂ ಪುಸ್ತಕರೂಪದಲ್ಲಿ ಯಕ್ಷಗಾನ ಪ್ರಸಂಗವನ್ನು ಸಿದ್ಧಗೊಳಿಸಿಕೊಡುತ್ತಿದೆ. ಇದಕ್ಕೆ ಅಕಾಡೆಮಿಯ ಸರ್ವಸದಸ್ಯರ ಸಹಮತವಿದೆ. ಈ ಯೋಜನೆಯನ್ನು ಕೃತಿರೂಪಕ್ಕೆ ತರಲು ಸಹಕರಿಸಿದವರೆಲ್ಲರನ್ನೂ, ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರನ್ನೂ, ಸರ್ಕಾರವನ್ನೂ ಹೃತ್ಪೂರ್ವಕವಾಗಿ ನೆನೆಯುತ್ತೇವೆ.



**ಪ್ರೊ. ಎಂ. ಎ. ಹೆಗಡೆ**
ಅಧ್ಯಕ್ಷರು
ಕರ್ನಾಟಕ ಯಕ್ಷಗಾನ ಅಕಾಡೆಮಿ



**ಎಸ್. ಎಚ್. ಶಿವರುದ್ರಪ್ಪ**
ರಿಜಿಸ್ಟ್ರಾರ್
ಕರ್ನಾಟಕ ಯಕ್ಷಗಾನ ಅಕಾಡೆಮಿ

## ಯಕ್ಷಪ್ರಸಂಗಕೋಶ ಯೋಜನೆ

ಕನ್ನಡ ಕಾವ್ಯದ ಚರಿತ್ರೆಯಲ್ಲಿ ಬಹುದೊಡ್ಡ ಸ್ಥಾನ ಪಡೆಯಬೇಕಾದ ಕೃತಿಗಳು ಅವಜ್ಞೆಗೊಳಗಾದುದನ್ನು ಗಮನಿಸಿ ಯಕ್ಷವಾಹಿನಿ ಸಂಸ್ಥೆಯಿಂದ ಯಕ್ಷಪ್ರಸಂಗಕೋಶದ ನಿರ್ಮಾಣವಾಗುತ್ತಿದೆ. ಯಕ್ಷಗಾನ ಪ್ರಸಂಗಗಳು ಪ್ರಯೋಗದ ಆಧಾರ ಪಠ್ಯಗಳು. ವ್ಯಾಖ್ಯಾನದ ಅಗತ್ಯವೂ ಇರುವುದರಿಂದ ಪ್ರಸಂಗಕವಿಗಳು ಬರೆದ ಗೀತೆಗಳು ಗುಣಮಟ್ಟದಲ್ಲೂ ಮೇಲಾಗಿದ್ದು ವಿದ್ವಾಂಸರಿಂದ ಮರಳಿ ಮರಳಿ ವ್ಯಾಖ್ಯಾನಕ್ಕೆ ಒಳಗಾಗಿವೆ. ಇಂತಹ ಪಠ್ಯಗಳನ್ನು ಖಿಲವಾಗದಂತೆ ಶಾಶ್ವತವಾಗಿ ಕಾಪಿಡುವುದೂ, ಜಾಗತಿಕ ಮಟ್ಟದಲ್ಲಿ ಲಭ್ಯವಾಗುವಂತೆ ಮಾಡುವುದೂ ನಮ್ಮ ಯಕ್ಷಪ್ರಸಂಗಕೋಶದ ಉದ್ದೇಶ. ಅದಕ್ಕೆ ಇಂದು ಅಂತರಜಾಲವೇ ಸೂಕ್ತ ಮಾಧ್ಯಮವಾಗಿದೆ. ಅಂತರಜಾಲದ ಮೂಲಕ ಪ್ರಕಟವಾದ ಪ್ರಸಂಗವೂ, ಅದನ್ನು ಸಿದ್ಧಪಡಿಸಿದ ಸಂಸ್ಥೆಯೂ ಇಡೀ ವಿಶ್ವದ ಮುಂದೆ ನಿಂತಿರುತ್ತದೆ ಎಂಬ ಅರಿವನ್ನುಇಟ್ಟುಕೊಂಡೇ ಪ್ರಸಂಗಗಳನ್ನು ಸಿದ್ಧಪಡಿಸಿದ್ದೇವೆ.

ಪ್ರಸಂಗಗಳ ಪ್ರಸ್ತುತ ರೂಪದಲ್ಲಿ ಇರುವ ಮುದ್ರಣ ದೋಷಗಳು, ವ್ಯಾಕರಣ ದೋಷಗಳು, ಗ್ರಾಮ್ಯಶಬ್ದಗಳ ಬಳಕೆಯಿಂದಾದ ಶೈಥಿಲ್ಯ, ಶಬ್ದಗಳನ್ನು ಬಿಡಿಸಬೇಕಾಗಿದ್ದಲ್ಲಿ ಕೂಡಿಸಿ, ಕೂಡಿಸಬೇಕಾಗಿದ್ದಲ್ಲಿ ಬಿಡಿಸಿ ಉಂಟಾದ ದೋಷಗಳು, ಮಟ್ಟುಗಳ ಹೆಸರುಗಳಲ್ಲಿ ಕಣ್ತಪ್ಪಿನಿಂದ ನುಸುಳಿದ ದೋಷಗಳು, ಆಟ ಆಡಿಸುವಾಗ ಅನುಕೂಲಕ್ಕೆ ತಕ್ಕಂತೆ ಭಾಗವತರು ಸೇರಿಸಿಕೊಂಡ ಅನ್ಯ ಪ್ರಸಂಗಗಳ ಪದಗಳು ಮುದ್ರಿತರೂಪದಲ್ಲಿ ಸೇರಿಹೋಗಿರುವುದು, ಮುದ್ರಣವಾಗುವಾಗ ಕೆಲವು ಪದಗಳು ಬಿಟ್ಟುಹೋಗಿರುವುದು ಇವುಗಳೆಲ್ಲ ಕವಿಯು ಶ್ರಮವಹಿಸಿ ರಚಿಸಿದ ಸುಂದರ ರಚನೆಯಲ್ಲಿ ಅರ್ಥಾಂತರವನ್ನೋ, ಅಪಾರ್ಥವನ್ನೋ ಉಂಟುಮಾಡುವ ಸಾಧ್ಯತೆಯಿದೆ. ಈಗ ಪ್ರಕಟಿಸುತ್ತಿರುವ ಪ್ರಸಂಗಗಳನ್ನು ಸಾಧ್ಯವಾದ ಮಟ್ಟಿಗೆ ಈ ದೋಷಗಳಿಂದ ಮುಕ್ತಗೊಳಿಸಿದ್ದೇವೆ ಎಂಬ ಭರವಸೆ ನಮಗಿದೆ. ಒಟ್ಟಿನಲ್ಲಿ ನಮ್ಮ 'ಪ್ರಸಂಗಕೋಶ'ದಿಂದ ಪಡೆದುಕೊಂಡ ಪ್ರಸಂಗವು ಶುದ್ಧವಾಗಿರಬೇಕೆಂಬುದೇ ನಮ್ಮ ಅಪೇಕ್ಷೆ.


ಶ್ರೀಧರ ಡಿ. ಎಸ್.
ಪ್ರಧಾನ ಸಂಪಾದಕರು


ಗಿಂಡೀಮನೆ ಮೃತ್ಯುಂಜಯ
ಸಹ ಸಂಪಾದಕರು


ರವಿ ಮಡೋಡಿ
ಯೋಜನಾಧ್ಯಕ್ಷರು

## ಯಕ್ಷವಾಹಿನಿ

ಯಕ್ಷಗಾನವು ಕನ್ನಡ ಸಂಸ್ಕೃತಿಯ ಕಿರೀಟದಲ್ಲಿ ರಾರಾಜಿಸುತ್ತಿರುವ ದೊಡ್ಡ ನವಿಲುಗರಿಯು. ಅಖಂಡ ಕರ್ನಾಟಕದ ಯಕ್ಷಗಾನ ಪರಂಪರೆಯ ಹಿರಿಮೆ ಗರಿಮೆಗಳನ್ನು ಹೆಚ್ಚಿಸುವತ್ತ ಅಂತರಜಾಲದ ಸಾಧ್ಯತೆಗಳನ್ನು ಸದುಪಯೋಗಪಡಿಸಿಕೊಳ್ಳುವುದೇ ಯಕ್ಷವಾಹಿನಿ ಸಂಸ್ಥೆಯ ಮುಖ್ಯ ಕಾಣ್ಕೆಯಾಗಿದೆ. ಯಕ್ಷಪ್ರಸಂಗಯಾದಿ ಮತ್ತು ಯಕ್ಷಪ್ರಸಂಗಕೋಶ ಇವೆರೆಡು ನಾವು ಈಗಾಗಲೇ ತೊಡಗಿಸಿಕೊಂಡಿರುವ ಪ್ರಾಥಮಿಕ ಯೋಜನೆಗಳು. ಈ ಯೋಜನೆಗಳಿಗೆ ಬೆನ್ನೆಲುಬಾಗಿ ನಮ್ಮೊಂದಿಗಿರುವ ಎಲ್ಲಾ ವಿದ್ವಾಂಸರು, ಪ್ರಸಂಗಕವಿಗಳು, ಸ್ವಯಂಸೇವಕರು, ಪ್ರಾಯೋಜಕರು ಹಾಗೂ ಎಲ್ಲಾ ರೀತಿಯ ಬೆಂಬಲ ಮತ್ತು ಸಹಾಯ ನೀಡುತ್ತಿರುವ ವಿಶ್ವವ್ಯಾಪಿ ಯಕ್ಷಪ್ರೇಮಿಗಳಿಗೆ ವಿನಮ್ರ ಧನ್ಯವಾದಗಳು. ಪ್ರಾಯೋಜಕತ್ವ ಹೆಚ್ಚಿದಂತೆ ನಮ್ಮ ಇನ್ನೂ ಅನೇಕ ಕನಸುಗಳು ಯೋಜನೆಗಳಾಗಿ ಅನಾವರಣಗೊಳ್ಳಲಿವೆ. ನಿಮ್ಮ ಹೆಚ್ಚುತ್ತಿರುವ ಸಹಕಾರ, ಸಹಾಯ, ಬೆಂಬಲ ಮತ್ತು ಆಶೀರ್ವಾದಕ್ಕೆ ನಾವು ಚಿರಋಣಿಗಳು.

**ಪ್ರೊ. ಮಲ್ಪೆ ಲಕ್ಷ್ಮೀನಾರಾಯಣ ಸಾಮಗ, ಗೌರವಾಧ್ಯಕ್ಷರು**

**ಡಾ. ಆನಂದರಾಮ ಉಪಾಧ್ಯ, ಕಾರ್ಯಾಧ್ಯಕ್ಷ ಮತ್ತು ವಿಶ್ವಸ್ಥ**

**ನಟರಾಜ ಉಪಾಧ್ಯ, ಕಾರ್ಯದರ್ಶಿ ಮತ್ತು ವಿಶ್ವಸ್ಥ**

**ರವಿ ಮಡೋಡಿ, ಖಜಾಂಚಿ ಮತ್ತು ವಿಶ್ವಸ್ಥ**

# ಸಾರಾಂಶ

**ಪ್ರಸಂಗ ವಿಧ:**
ಪೌರಾಣಿಕ

**ಆಧಾರ ಗ್ರಂಥ:**
ಮಾರ್ಕಂಡೇಯ ಪುರಾಣ

**ಭಾಷೆ:**
ಕನ್ನಡ

**ಹಿಂದಿನ ಪ್ರಕಾಶನಗಳ ವಿವರ:**
ಒಂದಾಣೆ ಮಾಲೆ ಮಂಗಳೂರು(1956)

**ಹಕ್ಕುಸ್ವಾಮ್ಯ ವಿವರ:**
ಈ ಅಂತರಜಾಲ ಆವೃತ್ತಿಯು ವಿಶ್ವದಾದ್ಯಂತ ಉಚಿತವಾಗಿ ಹಂಚಲ್ಪಡುವುದೇ ಜಂಟಿ ಪ್ರಕಾಶಕರ ಘನ ಉದ್ದೇಶವು. ಈ ಆವೃತ್ತಿಯನ್ನು ಹೇಗಿದೆಯೋ ಹಾಗೆಯೇ ಸಮಗ್ರವಾಗಿ ಮುದ್ರಿಸಲು ಯಾ ಅಂತರಜಾಲದ ಮೂಲಕ ಉಚಿತವಾಗಿ ಹಂಚಲು ಯಾವುದೇ ಅಭ್ಯಂತರ ಇಲ್ಲ. ಮೂಲ ಪ್ರಕಾಶನಗಳ ಹಕ್ಕುಸ್ವಾಮ್ಯ ಹೇಗಿದೆಯೋ ಹಾಗೆಯೇ ಉಳಿದಿರುತ್ತದೆ.

**ಒಟ್ಟು ಪದ್ಯಗಳು:**
86

**ಪಾತ್ರಗಳು:**
ಮೃಕಂಡು, ಮಾರ್ಕಂಡೇಯ, ಯಮ, ಚಿತ್ರಗುಪ್ತ, ಯಮದೂತ, ಮಹಾರುದ್ರ, ಮೃತ್ಯು, ಮಹಾವಿಷ್ಣು

**ಕಥಾಸಾರಾಂಶ:**
ಮೃಕಂಡು ಮುನಿಗೆ ಬಹಳ ಕಾಲ ಸಂತಾನವಾಗದೇ ಇದ್ದಾಗ, ಶಿವಾನುಗ್ರಹವಾಗುತ್ತದೆ. ಅಲ್ಪಾಯುವಾದ ಮಗನನ್ನು ಪಡೆದು, ಮಾರ್ಕಂಡೇಯ ಎಂಬ ಅಭಿಧಾನವಿರಿಸಿ, ಚೌಲೋಪನಯನಾದಿ ಸಂಸ್ಕಾರ ಮಾಡಿಸುತ್ತಾನೆ. ನಂತರ ಆಯುಃಪ್ರಮಾಣ ಮುಗಿದಾಗ ಯಮಭಟರು ಬಂದು ಅವನನ್ನು ಎಳೆಯಲು ತೊಡಗಿದಾಗ ಶಿವಪಂಚಾಕ್ಷರಿಯ ಪ್ರಭಾವದಿಂದ ಅವರಿಗೆ ಸೋಲಾಗುತ್ತದೆ. ನಂತರ ಯಮನೇ ಬಂದು ಪಾಶವಿಕ್ಕಿದಾಗ ಬಾಲಕ ಶಿವಲಿಂಗವನ್ನು ಬಿಗಿಯಾಗಿ ಅಪ್ಪುತ್ತಾನೆ. ಶಿವ ಪ್ರತ್ಯಕ್ಷನಾಗಿ ಯಮನಿಂದ ಮಾರ್ಕಂಡೇಯನನ್ನು ರಕ್ಷಿಸುವ ಕಥೆ.

**ಕವಿ ಪರಿಚಯ : (ಆಧಾರ: ಕರ್ನಾಟಕ ಕವಿ ಚರಿತ್ರೆ – ಡಾ. ಕಬ್ಬಿನಾಲೆ ವಸಂತ ಭಾರದ್ವಾಜ)**
ಅಡೂರು ಬಳಕಿಲ ವಿಷ್ಣ್ವಯ್ಯನವರು ಕುಂಬಳೆ ಸೀಮೆಯ ಆಡೂರಿನವರು. ಇವರ ಕಾಲ ೧೮೯೫ ರಿಂದ ೧೯೭೩. ತಂದೆ ಬಳಕಿಲ ಸುಬ್ರಾಯ, ತಾಯಿ ದೇವಕಿ. ಸ್ಥಾನಿಕ ಶಿವಬ್ರಾಹ್ಮಣ ಪಂಗಡಕ್ಕೆ ಸೇರಿದ ವಿಷ್ಣಯ್ಯನವರು ಅಡೂರು ಮೇಳವನ್ನು ಪುನಶ್ಚೇತನಗೊಳಿಸಿದವರೆಂದು ತಿಳಿದು ಬರುತ್ತದೆ. ಶ್ರೀಯುತರು ಮೂವತ್ತು ಪ್ರಸಂಗಗಳನ್ನು ರಚಿಸಿ ಕಲಾಕ್ಷೇತ್ರಕ್ಕೆ ತಮ್ಮದೇ ಆದ ಸೇವೆ ಸಲ್ಲಿಸಿದ್ದಾರೆ.

ಇವರು ಬರೆದ ಪ್ರಸಂಗಗಳು: ಅತಿಕಾಯ – ಇಂದ್ರಜಿತು – ಮೈರಾವಣ ಕಾಳಗ, ಉರುಡೂರು ಕ್ಷೇತ್ರ ಮಹಾತ್ಮೆ, ಕುರುಕ್ಷೇತ್ರ, ಗೋಕರ್ಣಕ್ಷೇತ್ರ ಮಹಾತ್ಮೆ, ಚಂದ್ರಗುಪ್ತ ಚರಿತ್ರೆ, ಜರಾಸಂಧ ವಧೆ, ದಶಾವತಾರ ಪ್ರಸಂಗ, ದೇವಪಾಂಡ್ಯ ಪ್ರತಾಪ, ದೇವೀ ವಿದ್ಯಾಧರೀ, ಪದ್ಮನೀ ವಿಶ್ವಸುಂದರಿ, ಪರಶುರಾಮ ಕ್ಷೇತ್ರೋತ್ಪತ್ತಿ, ಪಾಂಡವೋತ್ಪತ್ತಿ, ಭಕ್ತ ಮಾರ್ಕಂಡೇಯ, ಭೀಮ ದುರ್ಯೋಧನ ಪ್ರತಾಪ, ಮಂದಾರವತೀ ಪರಿಣಯ, ಮಹಾಗಣಪತಿ – ಲಲಿತೋಪಾಖ್ಯಾನ, ರಾಜಸೂಯ. ರಾಮ – ರಾವಣ, ವಿಕ್ರಮಾದಿತ್ಯ ಚರಿತ್ರೆ, ವಿಶ್ವರೂಪ – ವೃತ್ರೋಪಾಖ್ಯಾನ, ವೀರ ಮಕರಾಕ್ಷ, ಶಲ್ಯಾವಸಾನ, ಶಿವಮಹಾತ್ಮೆ, ಶ್ರೀದೇವೀ ಮಹಾತ್ಮೆ, ಸಹದೇವ ವಿಜಯ, ಸುಂದೋಪಸುಂದೋಪಾಖ್ಯಾನ, ಸುಭದ್ರಾ ಪರಿಣಯ, ಸ್ವರಾಜ್ಯ ವಿಜಯ, ಹರಿಹರ ಮಹಾತ್ಮೆ, ಧರ್ಮಸ್ಥಳ ಕ್ಷೇತ್ರ ಮಹಾತ್ಮೆ

**ಟಿಪ್ಪಣಿ :**

# ಪ್ರಸಂಗ ಸಾಹಿತ್ಯ

**ಭಾಮಿನಿ**
ಗಿರಿಜೆ ಭಾರತಿ ಲಕ್ಷ್ಮಿ ಗಣಪತಿ |
ಹರ ವಿರಿಂಚಿ ಮುರಾರಿ ಮುಖ್ಯರ |
ಚರಣಕಾನತನಾಗಿ ಭಕ್ತಿಯೊಳೊಲಿಯೆ ಪ್ರಾರ್ಥಿಸುತ ||
ಪರಮಮಾಯಾತೀತೆ ಮಂಗಲ |
ಚರಿತೆ ದುರ್ಗಾಂಬಿಕೆಯ ದ್ವಯಪದ |
ಸರಸಿಜಕೆ ತಲೆಬಾಗಿ ವರ್ಣಿಪೆನೀ ಮಹಾಚರಿತ || ೧ || 1 ||

**ಸೌರಾಷ್ಟ್ರ - ತ್ರಿವುಡೆ**
ಮಿತ್ರಕುಲಸಂಜಾತನಾಗಿಹ |
ಪೃಥ್ವಿಪತಿ ಋತುಪರ್ಣನೃಪನಿಂ |
ಗತ್ರಿಮುನಿ ಸತ್ಕಥೆಗಳನ್ನೊರ | ವುತ್ತಲಿರಲು || ೧ ||
ವರ ಮಹಾಮುನಿತಿಲಕ ಕೇಳೈ |
ಮೆರೆವ ಮಾರ್ಕಂಡೇಯ ಯೋಗೀ |
ಶ್ವರನಿಗಾಯುವನಿತ್ತರಾರೈ | ಒರೆವುದೆನಗೆ || ೨ ||
ಎಂದು ಭಕ್ತಿಯೊಳೆರಗಿದರಸನ |
ಕಂಧರವ ಪಿಡಿದೆತ್ತಿ ಕರುಣದೊ |
ಳಿಂದುಧರನನು ನೆನೆದುಸುರ್ದನು | ಸಂದ ಕಥೆಯಾ || ೩ || 4 ||

**ಭಾಮಿನಿ**
ಧರೆಯಧಿಪ ಚಿತ್ರೈಸು ಮುಂಗಥೆ |
ವರ ಮೃಕಂಡುಮುನೀಂದ್ರನೆಂಬಗೆ |
ತರಳ ಮಾರ್ಕಂಡೇಯನುದಿಸಿದ ಭರ್ಗನೊಲುಮೆಯೊಳು ||
ಮೆರೆಯೆ ಯೌವನದನಕ ವಟುಗಳ |
ನರವಿಯೊಳಗಿರಲೊಂದಿವಸ ಮುನಿ |
ಹರುಷದಿಂ ಕರೆಯಲ್ಕೆ ಬಂದಿಂತೆಂದ ಭಕ್ತಿಯೊಳು || ೧ || 5 ||

**ಕೇದಾರಗೌಳ - ಅಷ್ಟ**
ತಾತ ಚಿತ್ತೈಸೆನ್ನ ಮಾತ ನೀನಿಂದಿನೊ |
ಳ್ಯಾತಕೆ ಬಾರೆನುತಾ ||
ಪ್ರೀತಿಯೊಳ್ ಕರೆದಿಹುದ್ಯಾತರ ಕಾರ್ಯದೊ |
ಳಾಯ್ತು ನಿನ್ನಯ ಸಮ್ಮತಾ || ೧ ||
ಮಗನೆ ಬಂದೆಯ ಮುದ್ದು ಸುಗುಣ ಮಾರ್ಕಂಡೇಯ |
ಮೊಗ ನೋಡಲಾಗಿ ನಿನ್ನಾ ||
ಮೃಗಧರನೆಮ್ಮ ಭಕ್ತಿಗೆ ಮೆಚ್ಚುತಿತ್ತನಿಂ |
ದಿಗೆ ನೀನೆ ಕೀರ್ತಿರನ್ನಾ || ೨ ||
ಮನುಮಥಾರಿಯ ಪಾದವನಜದರ್ಚನೆಯನ್ನು |
ದಿನನಿತ್ಯ ಭಕ್ತಿಯೊಳು ||
ಮುನಿವಂಶದವರಾರಾಧನೆಗೈವದತಿಯೋಗ್ಯ |
ಜನುಮಸಾರ್ಥತೆಯೆಂದನು || ೩ ||
ಹರ ಗೌರಿಯರ ದಿವ್ಯ ಚರಣಸೇವೆಗೆ ನೀನು |
ಪರಿಪರಿ ಸುಮಗಳನು ||
ನಿರತ ಸಂಗ್ರಹಿಸಿ ತಂದಿರಿಸಲುಬೇಕಿದ |
ಮರೆಯಲು ಬಾರದಿನ್ನು || ೪ ||
ಅಪ್ಪಯ್ಯ ನೀನೆನಗೊಪ್ಪಿಸಿದಾಜ್ಞೆಯ |
ತಪ್ಪುವ ಸುತನೆ ನಾನು ||
ಕಪ್ಪುಕಂಧರನಡಿಗರ್ಪಿಸೆ ಮನವೆನ |
ಗಿಪ್ಪುದು ಸುಮ ತಹೆನು || ೫ || 10 ||

**ಕಂದ ಪದ್ಯ**
ಜನಕನೊಳನುಮತಿಯಂ ಗೊಂ |
ಡನುಪಮಗುಣನಿಧಿ ಮಾರ್ಕಂಡೇಯನು ಬಳಿಕಂ ||
ಮಿನುಗುವ ಪುಷ್ಪಂಗಳ ತರ |
ಲೊನದೆಡೆಗೈದಿದನು ಹರುಷದಿಂ ತಾನಾಗಂ || ೧ || 11 ||

**ಸೌರಾಷ್ಟ್ರ - ತ್ರಿವುಡೆ**
ಇತ್ತ ವಿಭವದೊಳೊಂದಿವಸ ರವಿ |
ಪುತ್ರನಹ ಯಮದೇವನೋಲಗ |
ವಿತ್ತು ಸಚಿವರೊಳೆಂದನತಿ ಮುದ | ವೆತ್ತಿ ಮನದಿ || ೧ ||
ಚಿತ್ರಗುಪ್ತರೆ ಕೇಳಿರಿಂದು ಧ |
ರಿತ್ರಿಯೊಳಗ್ಯಾರಿಹರು ಕೈಮಿನಿ |
ಪತ್ತನದ ಸೌಭಾಗ್ಯ ನೋಡಲು | ಸತ್ತು ಬಹರು || ೨ ||
ಮಾನವರೊಳುದ್ಭವಿಸಿ ಮೆರದಿಹ |
ಹೀನ ಪಾಪಿಗಳ್ಯಾರು ಮರ್ತ್ಯದಿ |
ಕಾಣಬಂದುದೆ ನಿಮ್ಮೆಣಿಕೆಗಿಂ | ದೇನು ಹೇಳಿ || ೩ ||
ಪರಿಕಿಸಲು ದುರಿತಾತ್ಮರೀ ಮಹ |
ನರಕಮಧ್ಯದಿ ಶೂನ್ಯರೈಸಲೆ |
ನರ ನೆರವಿ ಪುಣ್ಯಾತ್ಮರಾದರೆ | ಧರಣಿಯೊಳಗೆ || ೪ || 15 ||

**ಕಾಂಭೋದಿ - ಝಂಪೆ**
ಚಿತ್ತವಿಸು ಯಮದೇವ | ಪೃಥ್ವಿಯೊಳು ಜನಿಸಿರುವ |
ವ್ಯಕ್ತಿ ಮಾರ್ಕಂಡೇಯನೆನುವ ||
ಝುತ್ವಿಜನಿದೇದಿನದಿ | ಮೃತ್ಯುಕಾರಣದ ವಧೆ |
ಚಿತ್ರಿಸಿಹುದರಿತಿಹೆನು ಮನದಿ || ೧ ||
ಧಾರುಣೀಸುರನವನೆ ಘೋರ ದುರಿತಾತ್ಮಕನೆ |
ಯೇರಿಕೊಂಡಿಹ ಪ್ರಾಯದವನೆ ||
ಚಾರು ಪುಣ್ಯಾತ್ಮಕನೆ | ಪಾರಮಾರ್ಥಿಕನಹನೆ |
ವಾರತೆಯನರುಹಿರೆನ್ನೊಡನೆ || ೨ ||
ಹದಿನಾರು ವತ್ಸರದಿ | ಮುದದೊಳಿಹ ಸುಂದರದಿ |
ಸದಮಲಾತ್ಮಕನು ಯೌವನದಿ ||
ವಿಧಿಯೆ ಬರದಿರುವವಧಿ | ತುದಿಯು ಇಂದಿನ ದಿನದಿ |
ಬದಲು ಮಾತಿಲ್ಲ ಹೊಸ ವರದಿ || ೩ ||
ಆತನಾವೆಡೆಯಿಹನು | ಭೂತಳಾಮರನನ್ನು |
ಭೀತಿಯಿಲ್ಲದೆ ತರುವದಿನ್ನು ||
ಈ ತತೂಕ್ಷಣ ಪೋಗಿ | ಪಾತಕಿಯ ಬಳಿಗಾಗಿ |
ಮಾತಿತ್ತೆ ನಿಮಗೆ ಲೇಸಾಗಿ || ೪ || 19 ||

**ಭಾಮಿನಿ**
ದಂಡಧರನಾಜ್ಞೆಯಲಿ ಯಮಭಟ |
ರಂಡಲೆದು ಬಲುಬೇಗದಲಿ ಭೂ |
ಮಂಡಲದಿ ರಂಜಿಪ ಮೃಕಂಡುವಿನಾಶ್ರಮಕೆ ಬರಲು ||
ಖಂಡ ಪರಶುವನರ್ಚಿಸಲು ಸುಮು |
ವಿಂಡಕೊಯ್ಯುತಲಿಪ್ಪ ಮುನಿಮಾ |
ರ್ತಾಂಡತೇಜನ ಕಂಡು ಯಮಭಟರೊತ್ತಿದರು ಕನಲಿ || ೧ || 20 ||

**ಭೈರವಿ - ಏಕ**
ನಿಲ್ಲೆಲೊ ಮಾರ್ಕಂಡೇಯ | ಮುಂ |
ದೆಲ್ಲಿಗೆ ನೀನೈದುವೆಯಾ ||
ಬಲ್ಲಿದನೆಂದಿಹ ಶೌರ್ಯಾ | ಇಂ |
ದಿಲ್ಲಿಗೆ ಕೊನೆ ತಿಳಿದಿಹೆಯಾ || ೧ || 21 ||

**ಕೇದಾರಗೌಳ - ಅಷ್ಟ**
ಅರು ನೀವೆನ್ನನೀ ರೀತಿಯೊಳು ಬಂದು |
ಗಾರುಗೆಡಿಸುತಿಹುದು ||
ಭೂರಿವಿಕ್ರಮರೆಂದು ತೋರುವಿರೈಸಲೆ |
ಯೇರಿದ ಹಗೆಯೇನಿದು || ೧ || 22 ||

**ಭೈರವಿ - ಏಕ**
ಖಗಸುತ ವೈವಸ್ವತನಾ | ಭಟ |
ರುಗಳೈ ಸಲೆ ನಾವ್ ನಿನ್ನಾ ||
ಮುಗಿಸಲು ಬಂದೆವು ಜತನಾ | ಬಲು |
ಹಗೆಯಿದೆ ಪೊರಡೈ ಮುನ್ನಾ || ೧ || 23 ||

**ಕೇದಾರಗೌಳ - ಅಷ್ಟ**
ಧಾರುಣಿಯೊಳು ಕೆಟ್ಟ ಘೋರಕೃತ್ಯವಗೈದ |
ಕ್ರೂರ ಪಾಪಿಯು ನಾನಲ್ಲ ||
ಗೌರಿವಲ್ಲಭನ ಪಾದಾರವಿಂದಕೆ ಸುಮ |
ವೇರಿಸೆ ಬಂದೆನಲ್ಲಾ || ೧ || 24 ||

**ಭೈರವಿ - ಏಕ**
ವಿಧಿ ವಿಧಿಸಿದ ಕಡೆಯವಧಿ | ನಿನ |
ಗೊದಗಿರೆ ಬಾಳ್ವೆಯ ಜಗದಿ ||
ವಧಿಸದೆ ಬಿಡೆವೀಕ್ಷಣದಿ | ಮರು |
ಗಿದರಹುದೇ ಫಲ ಮನದಿ || ೧ || 25 ||

**ಭಾಮಿನಿ**
ಮುಳಿದು ಯಮಭಟರಾಗ ಮುನಿಕುಲ |
ತಿಲಕ ಮಾರ್ಕಂಡೇಯನುನ್ನತ |
ಗಳಕೆ ಪಾಶವನಿಕ್ಕಿ ಬಂಧಿಸುತೊಡನೆ ಘರ್ಜಿಸುತ ||
ಇಳೆಯೊಳುರುಳಿಸುತೆಳೆಯೆ ಬಲುಭಯ |
ಗೊಳುತ ಮನ್ಮನ ಮರುಗುತಲಿ ಸಿತ |
ಗಳನೆ ಹಾಯೆಂದೆನುತ ನುತಿಸಿದ ಶಿವನ ಗೋಳಿಡುತ || ೧ || 26 ||

**ನೀಲಾಂಬರಿ - ರೂಪಕ**
ಶಿವ ಶಂಕರ ಗೌರೀವರ | ಭವಹರ ಭಯಸಂಹರ |
ಭುವನದಿ ನಿಜಭಕ್ತರ | ನಿವಹಕಮೃತಸಾರ ||
ರವಿಪುತ್ರನ ಭಟರಿಂದಲಿ | ಭವಣೆಯೊಳಿಹೆನಿಂದಲಿ |
ತವಕದೊಳೆಳೆಯುತ್ತಲಿ | ಕವಿವರಿದೇನೆನಲಿ || ೧ || 27 ||

**ಕೇದಾರಗೌಳ - ಝಂಪೆ**
ಎಲ್ಲಿ ನಿನ್ನನ್ನು ಸಲಹಲು | ಬಹ ಗೌರಿ |
ವಲ್ಲಭನ ತೋರೀಗಲು ||
ನಿಲ್ಲದಾತನ ಸಹಿತಲೀ | ಯಮಲೋಕ |
ದಲ್ಲಿರಿಸದಿಹೆವಿಂದಿಲಿ || ೧ || 28 ||

**ನೀಲಾಂಬರಿ - ರೂಪಕ**
ನಿನ್ನಯ ಪದಭಜಕನ | ಮುನ್ನಿವರೆಳದೊಯ್ವರು ನಾ |
ನುನ್ನತ ದುರಿತಾತ್ಮನೆ ಯನ | ಗಿನ್ನೆಲ್ಲಿದೆ ಸದನ ||
ಸನ್ನುತ ಪನ್ನಗಭೂಷಣ | ಮನ್ನಿಸಿ ಪೊರೆಯನುದಿನ |
ಬನ್ನಬಡಿಸದಿರು ಗುಣ | ರನ್ನ ಉಮಾರಮಣ || ೧ || 29 ||

**ಕೇದಾರಗೌಳ - ಝಂಪೆ**
ಬಡ ವಿಪ್ರ ನಿನ್ನನೀಗಾ | ಯಮರಾಜ |
ನಡೆಯೊಳಿರಿಸುವೆವು ಬೇಗ ||
ನಡೆಯೊ ಬೊಬ್ಬಿಡದಿರೀಗಾ | ಪಾಪಿಯೆಂ |
ದೆಡೆಬಿಡದೆಯೆಳದರಾಗ || ೧ || 30 ||

**ಭೈರವಿ - ಝಂಪೆ**
ಬಿಡಿರೆನ್ನ ಪಾಶದಲಿ | ಪಿಡಿದೆಳೆಯದಿಂದಿನಲಿ |
ನಡುಗುತಿದೆ ಚಿತ್ತದಲಿ | ನುಡಿವೆ ಪ್ರೀತಿಯಲಿ || ೧ ||
ತಂದೆ ತಾಯಿಗಳಿಲ್ಲ | ಬಂಧು ಬಳಗಗಳಿಲ್ಲ |
ಬಂದುದೋರ್ವನೆಯಲ್ಲ | ಸಂದೇಹವಿಲ್ಲ || ೨ ||
ಹರನ ಪದಕರ್ಪಿಸಲು | ಭರಿತ ಸುಮ ವಪ್ಪಿಸಲು |
ಚರಿಸುವೆನು ವಿಪಿನದೊಳು | ಕರುಣವಿಡಿರೆನಲು || ೩ || 33 ||

**ಭಾಮಿನಿ**
ಅಳುತಳುತ ಗೋಳಿಡುತ ಮುನಿಕುಲ |
ತಿಲಕನಿಳೆಯೊಳು ಮಲಗುತೇಳುತ |
ಹಳುವದೊಳು ಯಮಭಟರ ಪಾಶದಿ ಸಿಲುಕಿ ಬೊಬ್ಬಿಡುತ ||
ಇಳೆಯೊಳಿಂತೆನಗೊದಗಿತನ ಕಂ |
ಗಳಿಗೆ ಶಿವಗುಡಿಯೊಂದು ಕಾಣಿಸೆ |
ವಳಪೊಗುತ ಬಿಗಿಪಿಡಿದ ಲಿಂಗವ ಶಿವನೆ ಸಲಹೆನುತ || ೧ || 34 ||

**ಏಕ ತಾಳ**
ದೇವ ನಿನ್ನ ನಾಮವಳಿಯಮೃತವ |
ಸೇವಿಸುತಿಹೆ ಮಹದೇವ ಸದಾಶಿವ ||
ಭಾವಜ ರಿಪುಭ | ಕ್ತಾವಳಿನಿಚಯವ |
ಪಾವನಗೊಳಿಸುವೆ ಜೀವವುಳಿಸು ಶಿವ || ದೇವ ನಿನ್ನ || ೧ || 35 ||

**ಮಾರವಿ - ಏಕ**
ಪೊಡವಿಯಮರ ನೀ ಬಿಡು ಶಿವಲಿಂಗವ |
ಪಿಡಿದಿಹುದೇಕಿಂತು ||
ಸುಡುಗಾಡಿನೊಳಿಹ ಮೃಡನ್ಯೆತರುವನೆ |
ಬಿಡಿಸಲು ಬಿಡು ಭ್ರಾಂತು || ೧ ||
ಯಮನನುಮತಿಯಿಂದೆಮಗಿಹುದೆಲೆ ಸಂ |
ಯಮಿಸುತ ನೋಡಿನ್ನು ||
ನಿಮಿಷವು ಬಿಡೆವೆಂದುಮೆಯರಸನ ಸಹ |
ಕ್ರಮದೊಳೆಳದರವನ || ೨ || 37 ||

**ವಾರ್ಧಕ**
ಪ್ರಳಯದೊಳ್ ಸಕಲ ಭೂತಳವ ಲಯವೆಸಗೆ ಶಿವ |
ತಳೆಯುವಂತುಗ್ರಮಹ ಕಲೆಗಳನ್ನಳವಟ್ಟು |
ಮುಳಿದು ಶಿವಲಿಂಗದಿಂ ಬೆಳೆದು ಮೈದೋರಿದಂ ತಿಳುಹಲೇನದ್ಭುತವನು ||
ಇಳೆಯಮರನನ್ನೊಯ್ಯಲೆಳವುತಿಹ ಭಟರು ವೆ |
ಗ್ಗಳ ರುದ್ರಮೂರ್ತಿಯಂ ತಿಳಿದಾಗ ಭೀತಿಯಂ |
ತಳೆದು ಪಾಶವ ಬಿಟ್ಟು ನಿಲದೋಡಿ ಯಮಗೆನಲು ತಿಳಿದನುಜೆಯಂ ಕರೆದನು || ೧ || 38 ||

**ಸೌರಾಷ್ಟ್ರ - ತ್ರಿವುಡೆ**
ಎತ್ತಲಿಹೆಯೆಲೆ ಮೃತ್ಯುಸೋದರಿ |
ಮತ್ತಕಾಶಿನಿ ಇತ್ತ ಬಾರೆಲೆ |
ಚಿತ್ರವಾಯ್ತೀ ಹೊತ್ತಿನಲಿ ಹೊಸ | ವಾರ್ತೆಯೊಂದು || ೧ ||
ಯೋಗಿಮಾರ್ಕಂಡೇಯನೆಂಬನ |
ಸಾಗಿಸಲು ನಮ್ಮವರು ತೆರಳುತ |
ಭೋಗಿಭೂಷಣಗಂಜಿದರು ಬೆರ | ಗಾಗಿ ಮನದಿ || ೨ ||
ಭಳಿರೆ ಚೋದ್ಯವಿದಗ್ರಜನೆ ಭೂ |
ತಳದೊಳಿಹ ಪ್ರಾಣಿಗಳ ತಂಡವ |
ನೆಳತರಲು ಹರನೇಕೆ ತಡದಿಹ | ತಿಳುಹು ಯೆನಗೆ || ೩ ||
ಪಾಶವನು ಬಂಧಿಸುತಲೆಳೆಯೆ ಮ |
ಹೇಶ ಲಿಂಗದೊಳುದಿಸಲೀಕ್ಷಿಸಿ |
ರೋಷಕಂಜುತ ಬಂದರೈಸಲೆ ಹೇಸಿಕೆಯಿದು || ೪ ||
ಈಶನಾಗಲಿ ಬೆದರುವೆನೆ ವಾ |
ಣೀಶ ತಾನೈತರಲಿ ಮಿಗೆ ಲ |
ಕ್ಷ್ಮೀಶನಡ್ಡೈಸಿದರು ನಿಮಿಷದಿ | ಘಾಸಿಸುವೆನು || ೫ ||
ಅಂದಡೆಲೆ ಕೇಳ್ ಭಗಿನಿಯಳೆ ನೀ |
ಮುಂದುವರಿದು ಮೃಕಂಡುಸುತನನು |
ತಂದುಕೊಡು ಬೇಗೆನುತಲಾಜ್ಞೆಯ | ಹೊಂದಿಸಿದನು || ೬ || 44 ||

**ಕಂದ ಪದ್ಯ**
ಇಂತಂಣನೊಳನುಮತಿಯಂ |
ತಾಂ ತಳೆಯುತ ನಡೆತಂದತ್ಯುಗ್ರದೊಳಂ ||
ಕಂತುವಿರೋಧಿಯ ಪರಿಕಿಸು |
ತಿಂತೆಂದಳು ಮೃತ್ಯು ವಿರೋಧದೊಳಾಗಂ || ೧ || 45 ||

**ಭೈರವಿ - ಮಟ್ಟೆ**
ಈಶನಹೆಯೊ ನೀನು ವರ ಮು |
ನೀಶನನ್ನು ಸಲಹುವಾತ |
ಪಾಶವಿಕ್ಕಿದವರ ಮಾನ | ದೂಷಿಸಿದೆಯ || ೧ ||
ಘೋರರೂಪೆಯಾಗಿ ತೋರ್ಪೆ |
ಯಾರೆ ನೀನು ಪೆಸರದೆಂತು |
ಭೂರಿ ಬೇಗ ಬಂದುದೇನು | ಕಾರಣಂಗಳೂ || ೨ ||
ಮೃತರ ಜೀವದೊಡೆಯ ಪ್ರೇತ |
ಪತಿಯ ಭಗಿನಿ ಮೃತ್ಯುವೈಸೆ |
ಯತಿಯನೊಯ್ಯಲಾಗಿ ಬಂದೆ | ಹಿತದಿ ಬಿಡುವೆಯ || ೩ ||
ಸಾವ ಮೊದಲೆ ಪಾಶವಿಕ್ಕಿ |
ಜೀವವೆಳವುದುಂಟೆ ಎನ್ನ |
ಭಾವಿಸುತ್ತ ಪಿಡಿದ ಭಕ್ತ | ಕಾವೆನೀತನ || ೪ ||
ಪೂರ್ವ ನೆಲೆಯ ಮರೆತು ನೀನು |
ಪಾರ್ವನನ್ನು ಬಿಡದಿರಲ್ಕೆ |
ಈರ್ವರನ್ನು ಸೆಳೆವೆ ಗರ್ವ | ತೋರ್ವದೇಕೆಲ || ೫ ||
ಮರೆಯ ಹೊಕ್ಕ ಶರಣನನ್ನು |
ಪೊರವುದೆನ್ನ ಬಿರಿದು ಕಂಡ |
ತೆರನ ಮಾಡೆನಲ್ಕೆ ಮೃತ್ಯು | ಉರಿಯನುಗುಳುತ || ೬ || 51 ||

**ಭಾಮಿನಿ**
ಕೃತ್ತಿವಾಸನ ನೆಲೆಯನರಿಯದೆ |
ಋತ್ವಿಜನ ಕಂಧರಕೆ ಪಾಶವ |
ಸುತ್ತಿ ಖತಿಯಿಂದೆಳದಳಾಕ್ಷಣವೇನನುಸುರುವೆನು ||
ಭಕ್ತವತ್ಸಲ ಸಲಹೆನಲು ಮುನಿ |
ಹತ್ತಿತತಿ ರೋಷಾಗ್ನಿ ಶಿವನಿಗೆ |
ಯೆತ್ತಿ ಶೂಲದಿ ಮೃತ್ಯುವನು ತಾ ಧರೆಗೆ ಕೆಡಹಿದನು || ೧ || 52 ||

**ಭೈರವಿ - ಝಂಪೆ**
ಭಕ್ತ ಮಾರ್ಕಂಡೇಯ | ಯಿತ್ತ ಬಾರೆನ್ನಯ್ಯ |
ಎತ್ತಿಕೊಂಬೆನು ಧೈರ್ಯ | ಚಿತ್ತನಾಗಯ್ಯ || ೧ ||
ಪಾಶದೊಳು ಬಂಧನದಿ | ಘಾಸಿಗೈವರೆ ಭರದಿ |
ಬೇಸರಿಸದಿರು ಮನದಿ | ಪೋಷಿಸುವೆ ದಯದಿ || ೨ ||
ಪರಮ ಪುರುಷನೆ ನಿನ್ನ | ನಿರತ ಭಜಿಸುವ ಸುಜನ |
ನೆರವಿಗಿಹುದೇ ಮರಣ | ವರ ಗೌರಿರಮಣ || ೩ || 55 ||

**ಕಂದ ಪದ್ಯ**
ಇನಿತಾದುದನಂ ತಿಳಿಯುತ |
ದಿನಮಣಿಸಂಭವ ಕುಪಿತೋದ್ರೇಕದೊಳಂ ||
ಮನುಮಥವೈರಿಯು ಗೈದುದ |
ನೆಣಿಸುತಲಿಂತೆಂದನು ತಾ ಘನವೈರದೊಳಂ || ೧ || 56 ||

**ಭೈರವಿ - ಏಕ**
ನರಕಾಧಿಪನೆಂದೆನುತ | ಬಲು |
ಬಿರಿದಿಹುದೆನಗನವರತ ||
ಕೊರತೆಯನಿಂದೆಸಗುತ್ತ | ಈ |
ತೆರಗೈದನೆ ಶಿವ ವ್ಯರ್ಥ || ೧ ||
ದಿಗಧಿಪರೊಳು ಬಲ್ಲಿದನು | ಯಮ |
ನಗರದ ಧೊರೆಯಾಗಿಹೆನು ||
ಮೊಗದೋರುವೆನೆಂತಿನ್ನು | ತ್ರೈ |
ಜಗದೊಳು ಪೇಳಲದೇನು || ೨||
ಜಗದೀಶನ ತಿಳಿದಿಹೆನು | ಕಡು |
ಪಗೆಯಿಂದೊದಗಿಹುದೇನು ||
ಭಗಿನಿಯ ಸಂಹರಿಸಿದನು | ಗ |
ರ್ವಗಳೇರಿತೆ ಯಮಗಿನ್ನು || ೩ ||

ಬಿಡೆ ಮಾರ್ಕಂಡೇಯನನು | ಶಿವ |
ನೆಡೆಯೊಳು ಹೊಂದಿರಲೇನು ||
ಪಿಡಿಯುತಲೀಗೆಳತಹೆನು | ಎಂ |
ದೊಡನೈದಿದನಾ ಯಮನು || ೪ || 60 ||

**ಸೌರಾಷ್ಟ್ರ - ತ್ರಿವುಡೆ**
ಭಳಿರೆಲವೊ ಮಹದೇವ ನಿನ್ನಯ |
ಬಳಿಗೆ ಬಂದ ಸಹೋದರಿಯ ನೀ |
ನಿಳೆಗೆ ಕೆಡಹಿದರಿಂದ ಕೀರ್ತಿಯ ತಿಲಕವ್ಯಾಕೆ || ೧ ||
ಮೃತ್ಯುವಿಂಗಪಮೃತ್ಯು ಯೋಗವ |
ನೊತ್ತಿಹನು ವಿಧಿ ಯನ್ನೊಳಿಂದಿಗೆ |
ಯಿತ್ತ ಕಳುಹಿದುದೇಕೆಯವಳನು | ವಾರ್ತೆಯರುಹು || ೨ ||
ಭೂತಪತಿ ನೀನಾಗಿ ಯೆನ್ನನು |
ಪ್ರೇತಪಾಲಕನೆನಿಸೆ ವಿಪ್ರನ |
ಘಾತಿಸುತ್ತೆಳತರಲಿಕಟ್ಟಿದೆ | ನೋತು ಯಿವಳ  || ೩ ||
ಪ್ರಾಣದಧಿಕಾರವೆ ಹೊರತು ಹುಲು |
ಕೋಣವಾಹನ ನಿನಗೆ ಕೊಲ್ಲುವ |
ತ್ರಾಣವೆಲ್ಲಿದೆ ತಪ್ಪಿ ನಡವೆಯ | ಹೀನಮತಿಯೆ || ೪ ||
ಜೀವವೆಳೆಯುತ್ತಿರಲು ವಿಪ್ರನ |
ಹಾವಳಿಗೆ ಮರುಳಾಗಿ ಹರ ನೀ |
ನೀ ವಿಧದಿ ಬಿಡದಿಹುದು ನೀತಿಯ | ಭಾವವಹುದೆ || ೫ || 65 ||

**ಭಾಮಿನಿ**
ಸೃಷ್ಟಿ ಸ್ಥಿತಿ ಲಯವೆನುತ ತ್ರೈವಿಧ |
ಕಟ್ಟಳೆಯನನುಸರಿಸಿ ಜಗದಲಿ |
ಹುಟ್ಟು ಮರಣಗಳೆಂಬುದಿದು ನೆಲೆ ಮನುಜರನ್ವಯದಿ ||
ಕೆಟ್ಟ ಪಾಪಿಗಳಳಿದಮೇಲೆಳ |
ದಿಟ್ಟು ಜೀವಾತ್ಮನನು ನಿನ್ನಯ |
ಪಟ್ಟಣದಿ ಬಾಳುವದೆ ನಿನಗಿಹ ಕೀರ್ತಿ ಸುಸ್ಥಿರದಿ || ೧ || 66 ||

**ಭೈರವಿ - ಏಕ**
ಮರ್ತ್ಯದೊಳಿಹ ಮಾನುಷರ | ನೆಳ |
ದಿತ್ತಪೆ ನರಕದೊಳಿದರ ||
ಯಿತ್ಯರ್ಥಿಸುವಧಿಕಾರ | ನಿನ |
ಗಿತ್ತವರ್ಯಾರು ವಿಚಾರ || ೧ ||
ಹರಿ ಹರ ಸುರಪಾದಿಗಳ | ಪುರ |
ಸ್ಥಿರವೈಸಲೆ ಸಾಧುಗಳ ||
ನೆರವಿಗೆನುವ ರೀತಿಗಳ | ನೀ |
ನರಿಯೆಯ ಶೈಮಿನಿಪಾಲ || ೨ ||
ತಿಳಿದೆಳೆವರ ಪ್ರಾಣಿಗಳ | ಸಂ |
ಕುಲ ಬಿಡದಿಹರೇ ಬಹಳ ||
ಅಳಿದವರಿಂತೈದಿದರೆ | ಎನ |
ಗುಳಿದವರಾರೈ ಬಹರೆ || ೩ ||
ದುರಿತಾತ್ಮರ ನೆರವಿಯನು | ನೀ |
ನರಿತೊಯ್ವುದೆ ಹೊರತಿನ್ನು ||
ನೆರೆ ಮಹ ಪುಣ್ಯಾತ್ಮರನು | ಸಂ |
ಹರಿಸದೆ ತಿಳಿದಿರು ನೀನು || ೪ ||
ದುರಿತ ಸುಕೃತರೆಂದೆನುವ | ನಿ |
ರ್ಭರ ಕೇಳಲು ನಿನ್ನೊಳವ |
ತೆರಳಿದುದಲ್ಲಿದು ಬೇಗ | ಬಿಡು |
ಸೆರೆಯನು ವಿಪ್ರನನೀಗ || ೫ || 71 ||

**ಭಾಮಿನಿ**
ಅಂತಕನು ನೀನಾದೊಡೆಯು ತ್ರಿಪು |
ರಾಂತಕನು ತಾನಹೆನು ನಂಬುತ |
ಚಿಂತಿಸುವ ವಿಪ್ರನನು ಬಿಡುವವನಲ್ಲ ನಡೆಯೆನಲು ||
ಕಂತುವೈರಿಯ ಸಹಿತ ಪಾಶದಿ |
ಮುಂತೆಳೆಯಲರಿತಧಿಕ ರೋಷವ |
ನಾಂತು ಶೂಲದಿ ತಿವಿಯಲಿನಸುತ ಕೆಡದನವನಿಯೊಳು || ೧ || 72 ||

**ವಾರ್ಧಕ**
ಹರನುಗ್ರಮಂನರಿತು ಸುರಪಮುಖ್ಯಾಮರರು |
ಸರಸಿಜೋದ್ಭವಗೆನಲ್ಕಿರದವರನೊಡಗೊಂಡು |
ಬರುತ ಶ್ರೀಹರಿಗೊರೆಯಲರಿತೆಲ್ಲರೊಂದಾಗಿ ತೆರಳಿದರು ಶಿವನ ಬಳಿಗೆ ||
ಕರವ ಮುಗಿದೆಲ್ಲವರ್ ಮರುಗುತಿರಲೀಕ್ಷಿಸುತ |
ನೆರೆ ಶಾಂತಮನನಾಗಿ ಮೆರದು ಮನ್ನಿಸಲಾಗ |
ಸರಸಿಜಾಕ್ಷಂ ಮಗುಳೆ ಪರಮೇಶನೊಡನೆಂದ ನೆರೆಯಲಿಹ ಕಾರ್ಯದೊಸಗೆ || ೧ || 73 ||

**ಸುರುಟಿ - ಏಕ**
ಯೇನಿದೇನಿದು ಶಿವನೆ | ಜೋದ್ಯವಿ |
ದೇನು ಉಮಾವರನೆ ||
ಭಾನುಕುಮಾರನ ಹಾನಿಯಗೈದೆಯ |
ಕಾಣಲು ಮುಂದಪಮಾನವಿದಾಯ್ತೆನೆ || ಯೇ || ೧ ||
ಶ್ರೀಲಲನಾವರನೆ | ರವಿಸುತ |
ಪೇಳಿದ ಗರ್ವವನೆ ||
ತಾಳಿದೆ ಖತಿ ನಿರ್ಮೂಲವ ಮಾಡಿದೆ |
ಕಾಲನಿವನ ನೀ ಪೇಳುವದೇನೈ || ಶ್ರೀ || ೨ ||
ಮೃತಿಗೈದಿಹ ಯಮನ | ಎಬ್ಬಿಸಿ |
ಕ್ಷಿತಿಯ ಸಲಹು ಮುನ್ನ ||
ಮತಿಯುತ ನೀನೈ ಸ್ಥಿತಿಯೆನಗಹುದೈ |
ಅತಿಹಿತ ನಡಸೈ ಸಿತಗಳನೆ || ನೀನೆಯೆ || ೩ || 76 ||

**ಭಾಮಿನಿ**
ಹರಿ ನಿರೂಪಿಸಲರಿತು ಪರಶಿವ |
ಪರಮ ಕರುಣದೊಳಮೃತ ಹಸ್ತದಿ |
ತರಣಿನಂದನ ಮೃತ್ಯುವನು ಸಹಿತೊಡನೆ ತಡವರಿಸೆ ||
ಭರದೊಳೆದ್ದಭಿನಮಿಸುತ ಭವಗೆ |
ಮುರಹರಗೆ ಸಹಿತೆರಗಿ ಕಾಲನು |
ಪುರಕೆ ಸೋದರಿಯೊಡನೆ ತೆರಳಿದನಧಿಕ ಹರುಷದಲಿ || ೧ || 77 ||

**ಸಾವೇರಿ - ಏಕ**
ಬಾಲ ನೀನಳಲದಿರು | ಸತ್ಕರುಣದಿ |
ಪಾಲಿಪೆನಂಜದಿರು ||
ಕಾಲನಿಂದಲಿ ಕಷ್ಟಕಾಲ ಬಂದೊದಗುವ |
ಗೋಳಿಲ್ಲ ಸುಖದೊಳಿರು | ಎನ್ನ ನಂಬಿರು || ೧ ||
ಸತ್ಯಾತ್ಮನೆಂದೆನಿಸಿ | ಸುಸ್ಥಿರ ಕೀರ್ತಿ |
ಎತ್ತಿ ಬಾಳ್ವುದು ಸಹಸಿ ||
ಮಿತ್ರ ಚಂದ್ರರು ಪೆಸರಿತ್ತಿರುವನಕವು |
ಯಿತ್ತೆನಾಯುವ ಹರಸಿ | ಸಂತೋಷವೆರಸಿ || ೨ || 79 ||

**ಕಂದ ಪದ್ಯ**
ಇನಿತಾನಂದದಿ ಪರಶಿವ |
ಮುನಿ ಮಾರ್ಕಾಂಡೇಯನ ಕಳುಹಲ್ಕಾಗಂ ||
ವನಿತೆಯರತ್ಯಾನಂದದಿ |
ಚಿನುಮಯರಿಂಗೆತ್ತಿದರಾರತಿಯತಿಮುದದಿಂ || ೧ || 80 ||

**ಧವಳಾರ - ಏಕ**
ವಿಧುಧರನಿಗೆ ಮಧುಸೂದನಗೆ |
ಪದುಮಧರಗೆ ಮದನಾಂತಕಗೆ ||
ತ್ರಿದಶನುತಗೆ ವರ ಬುಧನನು ಪೊರೆದಗೆ |
ಮದಗಜಗಮನೆಯರಧಿಕ ವಿಲಾಸದಿ ||
ವಿಧವಿಧದಾರತಿಯಾ ಬೆಳಗಿದರು || ಶೋಭಾನೆ || ೧ ||
ಶ್ರೀಲೋಲಗೆ ಕಾಲೀಧವಗೆ |
ಶೂಲಧರಗೆ ನೀಲಾಂಬರಗೆ ||
ನೀಲಗಳಗೆ ವನಮಾಲಿಯೆಂದೆನಿಪಗೆ |
ಮೂಲೋಕವ ನೆರೆ ಪಾಲಿಸುವವನಿಗೆ ||
ನೀಲದಾರತಿಯಾ ಬೆಳಗಿದರೂ || ಶೋಭಾನೆ || ೨ || 82 ||

**ಸೌರಾಷ್ಟ್ರ - ತ್ರಿವುಡೆ**
ಇಂತೆನುವ ಸತ್ಕಥೆಯನಾಭೂ |
ಕಾಂತನಹ ಋತುಪರ್ಣಗತ್ರಿಮ |
ಹಂತಮುನಿ ಭಕ್ತಿಯಲಿ ಪೇಳಿದ | ನೆಂತೆನುವದ || ೧ ||
ಪೃಥ್ವಿಸುರ ಸುಬ್ರಾಯನೆಂಬನ |
ಪುತ್ರನಾಗಿಹ ವಿಷ್ಣು ಹರಿಪದ |
ಭಕ್ತಿಯಲಿ ಬರೆದಿರ್ಪೆನೀ ಮಹ | ಸತ್ಯಕಥೆಯ || ೨ ||
ಧಾತ್ರಿಯೊಳಗುರುಡೂರೆನುವ ಸು |
ಕ್ಷೇತ್ರದೊಳು ರಂಜಿಪ ಮಹೇಶನ |
ಮಿತ್ರನಹ ಮಹಾವಿಷ್ಣು ಪಾದದೊ | ಳಿತ್ತೆ ಕೃತಿಯ || ೩ || 85 ||

**ಕಂದ ಪದ್ಯ**
ಕೃತಿಯಿದರಂ ಗೈದಿಹೆನು |
ನ್ನತ ತಪ್ಪಿರಲತಿಶಯವೆಂದೆಣಿಸದೆ ಮಹ ||
ಮತಿಯುತರದರಂ ತಿದ್ದಿದ |
ರತಿಹಿತ ಮೈತ್ರಿಗೆ ಭಾಗಿಯಾಗಿಹೆ ನಿರತಂ || ೧ || 86 ||

*****ಶುಭಂ*****

# ಕೃತಜ್ಞತೆಗಳು

**ಅಂತರಜಾಲ ಪ್ರಕಾಶನ ಪ್ರಾಯೋಜಕರು:** ಕರ್ನಾಟಕ ಯಕ್ಷಗಾನ ಅಕಾಡೆಮಿ, ಕರ್ನಾಟಕ ಸರ್ಕಾರ

**ಮೂಲ ಪ್ರಕಾಶಕರು:** ಒಂದಾಣೆ ಮಾಲೆ ಮಂಗಳೂರು

**ಪ್ರಸಂಗ ಪ್ರತಿ ಆಧಾರ:** ಒಂದಾಣೆ ಮಾಲೆ ಮಂಗಳೂರು ಇವರು ೧೯೫೬ರಲ್ಲಿ ಪ್ರಕಟಿತ ಪ್ರತಿ

**ಪ್ರಸಂಗ ಪ್ರತಿ ಕೊಟ್ಟವರು:** ಹರಿಕೃಷ್ಣ ಹೊಳ್ಳ, ಬ್ರಹ್ಮಾವರ

**ಪ್ರಸಂಗ ಪ್ರತಿ ಒದಗಣೆಗೆ ಸಹಕಾರ:** ಹರಿಕೃಷ್ಣ ಹೊಳ್ಳ, ಬ್ರಹ್ಮಾವರ

**ಅಂತರಜಾಲ ಪ್ರತಿ ಬರವಣಿಗೆ:** ಸುಬ್ರಮಣ್ಯ ಭಾಗವತ್, ಅಜಿತ್ ಕಾರಂತ್

**ಅಂತರಜಾಲ ಪ್ರತಿ ತಿದ್ದುಪಡಿ:** ಶ್ರೀಧರ ಡಿ. ಎಸ್., ಗಿಂಡೀಮನೆ ಮೃತ್ಯುಂಜಯ, ಅಶೋಕ ಮುಂಗಳೀಮನೆ, ದಿನೇಶ್ ಉಪ್ಪೂರ

**ಅಂತರಜಾಲ ಪ್ರತಿ ಉತ್ಪಾದನೆ:** ರವಿ ಮಡೋಡಿ,  ನಟರಾಜ ಉಪಾಧ್ಯ, ಅಶ್ವಿನಿ ಹೊದಲ

**ಅಂತರಜಾಲ ಪ್ರತಿ ಪ್ರಕಾಶನ:** ರವಿ ಮಡೋಡಿ, ಡಾ. ಪ್ರದೀಪ ಸಾಮಗ, ನಟರಾಜ ಉಪಾಧ್ಯ